NP – 003

# I Semester B.Com. Examination, May 2022
## (NEP) (2021-2022 and Onwards)
## ಕನ್ನಡ ಭಾಷಾಪತ್ಯ ಪತ್ರಿಕೆ – I
## ವಾಣಿಜ್ಯ ಕನ್ನಡ

Time : 2½ Hours

Max. Marks : 60

I. ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (ಎಂಬತ್ತು ಪದಗಳಿಗೆ ಮೀರದಂತೆ) **(5×4=20)**

1) ಅವಳ ತೊಡುಗೆ ಇವಳಿಗಿಟ್ಟು ಹಾಡಬಯಸಿದೆ ಎಂದರೇನು ?

2) ತಿರುವಳ್ಳುವರ್ ಹಾಗೂ ಶಿವಾಜಿ ಪ್ರತಿಮೆಗಳ ಪ್ರಕರಣದಿಂದ ಸಮಾಜ ಕಲಿಯಬೇಕಾದ ನೀತಿಗಳಾವುವು ?

3) ದುಡಿಯುವ ಕೈಗಳಿಗೆ ಕೆಲಸ, ಹೊಟ್ಟೆಗೆ ಅನ್ನ ನೀಡಲು ಗಾಂಧೀಜಿ ಏನು ಮಾಡಬೇಕೆಂದು ತಿಳಿಸಿದ್ದರು ?

4) ಜ್ಞಾನ ಪರ್ವದ ಮೂಲಕ ಭಾರತಕ್ಕೆ ವಿಜ್ಞಾನ-ತಂತ್ರಜ್ಞಾನ ಬಂದವು ಎಂಬ ಮಾತು ಎಷ್ಟು ಸತ್ಯ ? ಉದಾಹರಣೆ ಮೂಲಕ ವಿಶ್ಲೇಷಿಸಿರಿ.

5) ಜಾಗತೀಕರಣ ಬಿಳಿಯ ಯುರೋಪಿನ ಜನಾಂಗದವರ ಕುತಂತ್ರವೇ – ಚರ್ಚಿಸಿ.

6) ಧಾರ್ಮಿಕ ಮನೋನಿಯಂತ್ರಣ ಎಂದರೇನು ?

II. ಎರಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (ನೂರ ಅರವತ್ತು ಪದಗಳಿಗೆ ಮೀರದಂತೆ) **(10×2=20)**

1) ಯಾವುದಾದರೂ ನಾಲ್ಕು ರಿಟೇಲ್ ವ್ಯಾಪಾರಗಳ ಸಾಧಕ-ಬಾಧಕಗಳನ್ನು ಚರ್ಚಿಸಿ.

2) ಆರ್ಥಿಕ ನೀತಿಗೂ ನಿರುದ್ಯೋಗಕ್ಕೂ ಸಂಬಂಧವಿದೆಯೇ ? ವಿಶ್ಲೇಷಿಸಿ.

3) ಧ್ಯಾನದಲ್ಲಿ ಕಂಡ ಜೇಡರ ಹುಳು ಕತೆಯ ಸ್ವಾರಸ್ಯಗಳನ್ನು ಬರೆಯಿರಿ.

III. ಕೆಳಕಂಡ ಪಠ್ಯವನ್ನು ಮೂರನೆ ಒಂದು ಭಾಗಕ್ಕೆ ಸಂಕ್ಷೇಪಿಸಿ ಬರೆದು, ಸೂಕ್ತ ಶೀರ್ಷಿಕೆ ನೀಡಿರಿ. **(3×1=03)**

ವೇದ ಪುರಾಣಗಳ ಕಾಲದಿಂದಲೂ ನಮ್ಮಲ್ಲಿ ಅರಣ್ಯಗಳ ಬಗ್ಗೆ ವಿಶೇಷ ಮಾನ್ಯತೆ ಇದೆ. ದೈವತ್ವದ ಸ್ಥಾನವಿದೆ. ಆದಿವಾಸಿಗಳು ಬದುಕುವುದೆ ಅರಣ್ಯಗಳಲ್ಲಿ ಹೀಗಾಗಿ ಅವರು ಕಾಡಿನ ಪ್ರತಿ ಅಂಶಗಳೊಂದಿಗೆ ನಿಕಟ ಸಂಬಂಧಗಳನ್ನು ಹೊಂದಿರುತ್ತಾರೆ. ಪ್ರಾಚೀನಮಾನವತಾನುಬೇಟೆಯಾಡುತ್ತಿದ್ದಪ್ರಾಣಿಗಳನ್ನು ಪೂಜಿಸುತ್ತಲೂ ಇದ್ದ ಎಂಬುದಕ್ಕೆ 1880ರಲ್ಲಿ ಅಲ್ತಮಿರ ಬೆಟ್ಟದ ಗುಹೆಗಳಲ್ಲಿ ಸತಾಲಾ ಎಂಬ ಮಾನವಶಾಸ್ತ್ರಜ್ಞನಿಗೆ ಕಂಡುಬಂದ ವರ್ಣಚಿತ್ರಗಳೇ ಸಾಕ್ಷಿ. ಅನೇಕ ಪಂಗಡಗಳು ಬೇಟೆಗೆ ಮುನ್ನವು ಆಯಾ ಪ್ರಾಣಿವರ್ಗಗಳಿಗೆ ವಿಶೇಷ ಪ್ರಾರ್ಥನೆ ಸಲ್ಲಿಸುತ್ತಿದ್ದುದುಂಟು. ಇವೆಲ್ಲ ಮನುಷ್ಯ ಪ್ರಾಣಿಗಳ ನಡುವೆ ಇದ್ದ ಅನ್ಯೋನ್ಯ ಸಂಬಂಧವನ್ನು ಸೂಚಿಸುವುದು ಮಾತ್ರವೇ ಅಲ್ಲದೆ ಪರಿಸರಿಕ ಸಮತೋಲನವನ್ನು ಸೂಚಿಸುತ್ತವೆ.

ಅರಣ್ಯಗಳನ್ನು ಕೇವಲ ಮರಗಿಡಗಳ ಗುಂಪು ಎಂಬರ್ಥದಲ್ಲಿ ವ್ಯಾಖ್ಯಾನಿಸುವ ಪ್ರವೃತ್ತಿ ಸರಿಯಲ್ಲ. ಅದೊಂದು ಜೈವಿಕ ಹಾಗೂ ಸಂಸ್ಕೃತಿಗಳ ನೆಲೆ. ನಾಗರೀಕತೆ ನದಿ ದಂಡೆಗಳ ಕೊಡುಗೆಯಾದರೆ ನೈಜ ಸಂಸ್ಕೃತಿಗಳು ಕಾಡಿನ ಕೊಡುಗೆ. ನಾಗರೀಕತೆ ಕಾಲಘಟ್ಟದಲ್ಲಿ ಅನೇಕ ಸ್ಥಿತ್ಯಂತರಗಳಿಗೆ ಒಳಗಾಗಿದೆ. ಬದಲಾಗುತ್ತಲೇ ಬಂದಿದೆ. ಆದರೆ ಕಾಡಿನ ಸಂಸ್ಕೃತಿ ಮಾತ್ರ ಯಾವುದೇ ಬೃಹತ್ ಬದಲಾವಣೆಗಳ ಹೊಡೆತಕ್ಕೆ ಸಿಗದೆ ಸಾಧ್ಯವಾದಷ್ಟು ತನ್ನ

ಮೂಲ ಸ್ವರೂಪವನ್ನೆ ಉಳಿಸಿಕೊಂಡು ಬಂದಿದೆ. ಬಾಂಧವ್ಯಗಳೆಲ್ಲ ಸ್ವತಂತ್ರ ಮತ್ತು ಸಹಕಾರಿ ನಿರ್ವಹಣೆಯ ಸಂಗತಿಗಳಾಗಿವೆ. ನಾಗರೀಕತೆಯು ಗ್ರಾಮೀಣ ಸಂಸ್ಕೃತಿ, ನಗರ ಸಂಸ್ಕೃತಿಗಳನ್ನು ಹುಟ್ಟು ಹಾಕಿದೆ. (ಸುಮಾರು 120 ಪದಗಳಿವೆ, 40 ಪದಗಳಿಗೆ ಇದನ್ನು ಇಳಿಸಬೇಕು)

IV. ಸಂಕ್ಷೇಪಿಸಿದ ಬರಹ ಆಧರಿಸಿ ಎರಡು ಪ್ರಶ್ನೆ ರೂಪಿಸಿ. (2×1=02)

V. ಇವುಗಳಲ್ಲಿ ಎರಡು ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ. (1×2=02)

1) ಪ್ರತಿಮೆ 2) ಕೀಳರಿಮೆ 3) ಜನಸಂಖ್ಯೆ 4) ಭರವಸೆ

VI. ರಾಷ್ಟ್ರೀಯ ಕ್ರೀಡೆಯಲ್ಲಿ ಭಾಗವಹಿಸಲು ಅನುಮತಿ ಕೋರಿ ನಿಮ್ಮ ಪ್ರಾಂಶುಪಾಲರಿಗೊಂದು ಪತ್ರ ಬರೆಯಿರಿ. (1×4=04)

VII. ಇವುಗಳಲ್ಲಿ ನಾಲ್ಕು ಪದಗಳಿಗೆ ಅರ್ಥ ಬರೆಯಿರಿ. (1×4=04)

1) ಬೈಲಾ 2) ದತ್ತಾಂಶ 3) ಪಂಚೇಂದ್ರಿಯ 4) ಸರಕು

5) ಝೂನ್ 6) ಮೌಢ್ಯ 7) ಹುತಾತ್ಮ 8) ಹುರುಳು

VIII. ಇವುಗಳಿಗೆ ಒಂದೊಂದು ಸರಿ ಉತ್ತರವನ್ನು ಗುರುತಿಸಿ ಬರೆಯಿರಿ. ಎಲ್ಲಾ ಐದು ಪ್ರಶ್ನೆಗಳಿಗೆ ಉತ್ತರಿಸಿ. (1×5=05)

1) ಭಾರತದ ರೈತರಿಗೆ ತಿಳಿದಿದ್ದ ಭತ್ತದ ತಳಿಗಳ ಸಂಖ್ಯೆ

ಎ) 1000 ತಳಿ ಬಿ) 10000 ತಳಿ ಸಿ) 100 ತಳಿ ಡಿ) 100000 ತಳಿ

2) ಭಾಷೆ ಎಂದರೆ ರಷ್ಯನ್ ಭಾಷೆಯಲ್ಲಿ

ಎ) ದನ ಬಿ) ವನ ಸಿ) ಜನ ಡಿ) ಬನ

3) ಠಾಗೂರ್ ಸ್ಥಾಪಿಸಿದ ಶಿಕ್ಷಣ ಸಂಸ್ಥೆ

ಎ) ಕಲಾನಿಕೇತನ ಬಿ) ವಿದ್ಯಾನಿಕೇತನ ಸಿ) ಶಾಂತಿನಿಕೇತನ ಡಿ) ಓ ಅನಿಕೇತನ

4) ಸ್ತ್ರೀ ಶಕ್ತಿಗೆ ಸೇರಲು ಅರ್ಹ ವಯಸ್ಸು

ಎ) 19 ಬಿ) 18 ಸಿ) 20 ಡಿ) 17

5) ಲಿಪಿಯಿಲ್ಲದ ಕನ್ನಡದ ಉಪಭಾಷೆ

ಎ) ದೇವನಾಗರಿ ಬಿ) ಬ್ಯಾರಿ ಭಾಷೆ ಸಿ) ಮರಾಠಿ ಡಿ) ಕೊಡವ